ಕೇಂದ್ರ ಸರ್ಕಾರದ ಮೇಲೆ ಹಾಗೂ ಸಂಬಂಧಪಟ್ಟಂತಹ ಪ್ರಾಧಿಕಾರದ ಮೇಲೆ ಒತ್ತಾಯ ತರುವಂತಹ ಕೆಲಸವನ್ನು ಮಾಡುತ್ತದೆ

ಉಪಾಧ್ಯಕ್ಷರು ಮುಂದಿನ ವಿಷಯಗಳನ್ನು ಪ್ರಸ್ತಾಪಿಸಬೇಕಾದ ಮಾನ್ಯ ಸದಸ್ಯರುಗಳಾದ ಗೋಪಾಲಕೃಷ್ಣ ಬೇಳೂರು ಮತ್ತು ಮಾನ್ಯ ಸುನಿಲ್ ಕುಮಾರ್ ರವರು ಸದನದಲ್ಲಿ ಕಾಣುತ್ತಿಲ್ಲ ಆದ್ದರಿಂದ ಈಗ ಮಾನ್ಯ ರಮೇಶ್ ಕುಮಾರ್ ರವರ ವಿಚಾರ ತೆಗೆದುಕೊಳ್ಳೋಣ

ಊ] **ವಿಷಯ "ಸುವರ್ಣ ಗ್ರಾಮ" ಯೋಜನೆ ಅಡಿ ಗ್ರಾಮಗಳನ್ನು ಆಯ್ಕೆ ಮಾಡಿ ಹೊರಡಿಸಲಾದ ಪಟ್ಟಿಯಿಂದ ಮೂರು ಗ್ರಾಮಗಳನ್ನು ಕೈಬಿಟ್ಟು, ಹೊಸದಾಗಿ ಮೂರು ಗ್ರಮಗಳನ್ನು ಸೇರಿಸಿರುವ ಬಗ್ಗೆ**

ಶ್ರೀ ಕೆ ಆರ್ ರಮೇಶ್ ಕುಮಾರ್ (ಶ್ರೀನಿವಾಸಪುರ) ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಧ ಉದಾಸಿಯವರು ಸದನದಲ್ಲಿ ಇರಬೇಕಾಗಿತ್ತು ಈ ವಇಚಾರ ಅವರ ಇಲಾಖೆಎ ಸಂಬಂಧಿಸಿದೆ ನನ್ನ ಮತಕ್ಷೇತ್ರದಲ್ಲಿ ಸುವರ್ಣ ಗ್ರಾಮಗಳ ಪಟ್ಟಿಯೊಂದನ್ನೇನು ಸರ್ಕಾರ ಅಧಿಕೃತವಾಗಿ ಹೊರಡಿಸಿತ್ತೋ, ಅದನ್ನು ಇಲ್ಲಿ ಆಸ್ವಾಸನೆ ಕೊಟ್ಟಧ ಮೇಲೆ, ಮತ್ತೆ ಮೊನ್ನೆ ಮೂರು ಗ್ರಾಮಗಳನ್ನು ಪಟ್ಟಿಯಿಂದ ಬದಲಾಯಿಸಿದ್ದಾರೆ

ಉಪಾಧ್ಯಕ್ಷರು ಮಾನ್ಯ ಧರ್ಮಸಿಂಗ್ ರವರು, ಮಾನ್ಯ ರಮೇಶ್ ಕುಮಾರ್ ರವರು, ಮಾನ್ಯ ಸಿದ್ದರಾಮಯ್ಯನವರು, ಮಾನ್ಯ ಡಿ ಕೆ ಶಿವಕುಮಾರ್ ರವರು ಮತ್ತು ಮಾನ್ಯ ಖರ್ಗೆಯವರು ದಕ್ಷಿಣ ಕನ್ನಡ ಜಿಲ್ಲೆಯ ಜೆ ಡಿ (ಎಸ್) ಮುಖಂಡರಾಗಿದ್ದ ವಸಂತ ಬಂಗೇರಾ ಅವರು ಅಬ್ಕಾರಿ ಬಗ್ಗೆ ನೀಡಿದ ಹೇಳಿಕೆ ಬಗ್ಗೆ ಚರ್ಚಿಸಲು ಸೂಚನೆ ಕೊಟ್ಟಿದ್ದೀರಿ

ಶ್ರೀ ಕೆ/ಆರ್ ರಮೇಶ್ ಕುಮಾಖ ಹೌದು, ನೋಟೀಸ್ ಕೊಟ್ಟಿದ್ದೇವೆ ಅದನ್ನು ನಾಳೆ ತೆಗೆದುಕೊಳ್ಳೋಣ ಅವರು ಇದದಾಗ ತೆಗೆದುಕೊಳ್ಳೋಣ

ಉಪಾಧ್ಯಕ್ಷರು ಆಯಿತು

ಶ್ರೀ ಕೆ ಆರ್ ರಮೇಶ್ ಕುಮಾರ್ ಈಗ ನನ್ನ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೇಳುತ್ತಿದ್ದೇನೆ

ಉಪಾಧ್ಯಕ್ಷರು ಆಯಿತು ಕೇಳಿ

ಶ್ರೀ ಕೆ ಆರ್ ರಮೇಶ್ ಕುಮಾರ್ (ಶ್ರೀನಿವಾಸಪುರ) ಈ ಬಗ್ಗೆ ಉತ್ತರಿಸಲು ಮಾನ್ಯ ಉದಾಸಿಯವರನ್ನು ಕರಿಸಿದರೆ ಒಳ್ಳೆಯದು ಮಾನ್ಯ ಪ್ರಕಾಶ್ರ ರವರು ಈಗಾಗಲೇ ಇಲಲಿ ಇದ್ದಾರೆ, ಆದ್ದರಿಂದ ನಾನು ಪ್ರಸ್ತಾಪಿಸುತ್ತಿದ್ದೆನೆ ಮಾನ್ಯ ಉದಾಸಿಯವರು ಮೊದಲು ಅವರ ಇಲಾಖೆಯಿಂದ ೯ ಗ್ರಾಮಗಳನ್ನು ಸೆಲೆಕ್ಟ್ ಮಾಡಿ ಆವುಗಳ ಪಟ್ಟಿಯೊಂದನ್ನು ಹೊರಡಿಸಿದ್ದರು ಆ ೯ ಗ್ರಾಮಗಳಲ್ಲಿ 'ಜನರೆಲ್ಲಾ ಹೋಗಿ ಪೂನೆ ಮಾಡಿ, ಕೆಲಸಗಳನ್ನು ಶುರು ಮಾಡಿದ್ದಾರೆ ಇದ್ದಕ್ಕಿದ್ದ ಹಾಫ್ ಮೊನ್ನೆ ಮತ್ತೊಂದು Notification ಹೊರಡಿಸಿ, ಅದರಲ್ಲಿ ಮೊದಲಿದ್ದ ಗ್ರಾಮಗಳಲ್ಲಿ ಮೂರನ್ನು ತೆಗೆದು ಬೇರೆ ಮೂರು ಗ್ರಾಮಗಳನ್ನು ಸೇರಿಸಿದ್ದಾರೆ ಅವತ್ತು ಈ ವಿಚಾರದ ಬಗ್ಗೆ ಮಾನ್ಯ ಗುರುಪಾದಪ್ಪ ನಾಗವಾರಪಲ್ಲಿಯವರು ಪ್ರಸ್ತಾಪಿಸಿದಾಗ ನಾವೆಲ್ಲಾ ಆನ್ಯ ಸಭಾದ್ಯಕ್ಷರ ಕೊರಡಿಯಲಿ ಸೇರಿ, ಇಲ್ಲಿಗೆ ಬಂದು ಹೇಳಿಕೆ ಮಾಡಿದ ಮೇಲೆ ಈ ರೀತಿ ಆಗಿದೆ ಮಾನ್ಯ ಉದಾಸಿಯವರಲ್ಲಿ ಕೇಳಿದೆ ಅದು ನನ್ನ ಗಮನಕ್ಕೆ ಬಂದಿಲ್ಲ ಬಹುಶಃ ಮಾನ್ಯ ಮುಖ್ಯಮಂತ್ರಿಗಳೇನಾದರೂ ಅದನ್ನು ಮಾಡಿದ್ದಾರೋ, ಏನೋ, ನನಗೆ ಗೊತ್ತಿಲ್ಲವೆಂದು ಅವರು ಹೇಳಿದರು ಇದನ್ನೇನು ದೊಡ್ಡ ವಿಷಯ ಮಾಡುವುದು ನನಗೆ ಇಷ್ಟವಿಲ್ಲ ಆ ರೀತಿ ಹೊಸದಾಗಿ ಸೇರಿಸಿದ ಮೂರು ಗ್ರಮಗಳನ್ನು ಪಟ್ಟಿಯಿಂದ ತಎಗೆಯಿರಿ ಎಂದು ನಾನು ನಿಮಗೆ ಹೇಳುವುದಕ್ಕಾಗುವುದಿಲ್ಲ ಅದರಿಂದ ನನಗೆ ಕೆಟ್ಟ ಹೆಸರು ಬರುತ್ತದೆ ಅವರೂ ನನ್ನ ಗ್ರಾಮಗಳೇ, ಅವುಗಳನ್ನು ಹೆಚ್ಚುವರಿಯಾಗಿ ಪರಿಗಣನೆ ಮಾಡಬೆಕಾಗುತ್ತದೆ, ಅವುಗಳ ಹೆಸರನ್ನು ಪಟ್ಟಯಿಒಂದ ತೆಗೆಯುವುದಕ್ಕಂತೂ ಆಗುವುದಿಲ್ಲ ನಿನ್ನೆಯಿಂದ

ಯಾವುದು ಆ ಮೂರು ಗ್ರಾಮಗಳು ತೆಗೆದಿದ್ದೇವೆ ಎಂದು Notification ಹೊರಡಿಸಿದ್ದಾರೋ, ಆ ಗ್ರಾಮಗಳ ಜನರು ಅಲ್ಲಿ ಉಪವಾಸ ಕುಳಿತಿದ್ದಾರೆ ಸುಮ್ಮನೆ ಈ ರೀತಿ ಸಮಸ್ಯೆಗಳನ್ನು ಹುಟ್ಟಿ ಹಾಕಿದರೆ, ಅವುಗಳನ್ನು ನಾವು ಹೇಗೆ ನಿಭಾಯಿಸಬೆಕು? This is uncalled for If they wanted three villages, they could have added to the villages list ನಮಗೇನೂ ಅದಕ್ಕೆ ಆಕ್ಷೇಪಣೆ ಇಲ್ಲ ಹತ್ತು ವಿಲೇಜ್ ಕೊಟ್ಟರೂ ಸಹ ನಮಗೆ ಖುಷಿಯಾಗುತ್ತದೆ ಆ ಗ್ರಾಮಗಳಲ್ಲಿ ಕೆಲಸ ಶುರು ಮಾಡಿದ ಮೇಲೆ, ಪಟ್ಟಿಯಿಂದ ಅವುಗಳ ಹೆಸರುಗಳನ್ನು ತೆಗೆದರೆ ಹೇಗೆ ? ಮಾನ್ಯ ಉದಾಸಿಯವರು ನಿನ್ನೆ ನನ್ನನ್ನು ಹುಡುಕಿಕೊಂಡು ಬಂದು ಆ ಬಗ್ಗೆ ಹೇಳಿದರು ಆ ಗ್ರಾಮಗಳನ್ನು ಹಎಚ್ಚುವರಿಯಾಗಿ ತೆಗೆದುಕೊಳ್ಳುತ್ತೇನೆ ಎಂದು ಅವರು ನನಗೆ ಹೇಳಿದರು ಆದರೆ ನಾನು ಬೆಳಿಗ್ಗೆಯಿಂದ try ಮಾಡುತ್ತಿದ್ದೇನೆ ಅವರ officers ಯಾರೂ ನನಗೆ ಸಿಗುತ್ತಿಲ್ಲ, Notification ಕೂಡ ಇನ್ನೂ ಹೊರಡಿಸಿಲ್ಲ ಪುನಃ ಅದನ್ನು ದೊಡ್ಡ ವಿಷಯವನ್ನಾಗಿ ತೆಗೆದುಕೊಂಡು ಗದ್ದಲ ಮಾಡಿ, unpleasant situation create ಮಾಡುವುದರ ಬದಲು, ಮಾನ್ಯ ಪ್ರಕಾಶ್ ರವರೆ, ದಯಮಾಡಿ ತಮ್ಮ senior colleague ಗೆ ತಾವೇ ಈ ಬಗ್ಗೆ ಹೇಳಬೇಕೆಂದು ಕೋರುತ್ತೇನೆ Atleast, by Monday ನಮಗೆ ಆ Notification ಬಂದರೆ ಅನುಕೂಲವಾಗುತ್ತದೆ ಆ ಗ್ರಾಮಗಳನ್ನು ಸೇರಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಅಪೇಕ್ಷೆ ಪಟ್ಟಿದ್ದರೆ ಅದು ಒಳ್ಳೆಯದೇ ಅವರು ಈ ರಾಜ್ಯದ ಧಣಿ ಅವರು ಬೇಕಾದರೆ ಅವುಗಳನ್ನು ಸೇರಿಸಬಹುದು ನಮ್ಮ ಇನ್ನೂ ಮೂರು ಗ್ರಾಮಗಳನ್ನು ಸೇರಿಸಿದರೆ ನಮಗೆ ಖುಷಿಯೇ ಆಗುತ್ತದೆ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಕ್ಷೇತ್ರದ ವಿಚಾರದಲ್ಲಿ ಅಷ್ಟು ಮಾತ್ರ ಆಸಕ್ತಿ ವಹಿಸಿರುವುದು ಸಂತೋಷದ ವಿಚಾರ Direct ಆಗಿ ಮಾನ್ಯ ಮುಖ್ಯ ಮಂತ್ರಿಗಳೇ ನನ್ನ ಕ್ಷೇತ್ರದ ವಿಚಾರದಲ್ಲಿ ಮತ್ತು ನನ್ನ ವಿಚಾರದಲ್ಲಿ ಆಸಕ್ತಿ ವಹಿಸುತ್ತಿರುವುದು ಸಂತೋಷದ ವಿಚಾರವಾಗಿದೆ I am a privileged man in this

Assembly ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಿಗೂ ನನ್ನ ಕೃತಜ್ಞತೆಯನ್ನು ತಿಳಿಸುತ್ತೇನೆ ಸಾಧ್ಯವಾದರೆ ಇನ್ನೂ ೩-೪ ವಿಲೇಜಸ್ ಸೇರಿಸುವುದಾದರೆ, that would be a welcome move ದಯಮಾಡಿ ಆ Notification ಸೋಮವಾರದೊಳಗಾಗಿ ಬರುವಂತೆ ಮಾಡಿದರೆ ಬಹಳ ಸಂತೋಷವಾಗುತ್ತದೆ

ಶ್ರೀ ಕೆ ಶ್ರೀನಿವಾಸ ಗೌಡ ಒಮ್ಮೆ ಪಟ್ಟಿಯಲ್ಲಿದ್ದ ಗ್ರಾಮದ ಹೆಸರನ್ನು ತೆಗೆದರೆ, ಅಲ್ಲಿನ ಶಾಸಕರ ಗತಿ ಏನಾಗಬೆಕು? ನಮ್ಮಲ್ಲೂ ಮೂರು ಗ್ರಾಮಗಳ ಹೆಸರುಗಳನ್ನು ತೆಗೆದಿದ್ದಾರೆ ನಾನು ಆ ಬಗ್ಗೆ ಹೇಳಿದಾಗ, ಮಾನ್ಯ ಉದಾಸಿಯವರು ಅನದ್ನು ಸರಿ ಮಾಡಿಕೊಡುತ್ತೇನೆಂದು ಹೇಳಿದ್ದಾರೆ ಆದ್ದರಿಂದ ನಾನು ಧೈರ್ಯವಾಗಿ ಕುಳಿತಿದ್ದೆನೆ ರಾಜಕೀಯವಾಗೇನೂ ಅಲ್ಲಿ ಹೆಸರುಗಳನ್ನು ಪಟ್ಟಿಯಿಂದ ತೆಗೆದಿಲ್ಲ

ಶ್ರೀ ಎಂ ಪಿ (ಗೃಹ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಶ್ರೀನಿವಾಸ ಗೌಡರು privileged man ಅಲ್ಲ ಬಾವ-ಮೈದುನರು ಕುಳಿತುಕೊಣಡು ಅದನ್ನು ಡರಿಪಡಿಸಿಕೊಳ್ಳಬಹುದು ಅದರ ಬಗ್ಗೆ ನಾವು ಅವರಿಗೆ ಹೇಳಿಕೊಳ್ಳುತ್ತೇವೆ ಅದೇನೂ ಅಷ್ಟು ಕಷ್ಟವಾಗುವುದಿಲ್ಲ ಮಾನ್ಯ ರಮೇಶ್ ಕುಮಾಱು ರವರ ವಿಚಾರ ಬೇರೆ, ಅವರಿಗೆ ನವು ಆ ರೀತಿ ಹೇಳುವುದಕ್ಕಗುವುದಿಲ್ಲ ಮೊನ್ನೆ ಕೂಡ ಸದನದಲ್ಲಿ ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರ ಪ್ರಶ್ನೆ ಬಂದಾಗ, ಮಾನ್ಯ ಸಭಾಧ್ಯಕ್ಷರ ಕೊರಡಿಯಲ್ಲಿ ಕುಳಿತು ಮಾತನಾಡಿದ್ದೇವೆ ಈಗೇನಾದರೂ ಅವುಗಳನ್ನು ತೆಗೆಯಲಿಕ್ಕೆ ಹೋದರೆ ಬಹಳ ತೊಂದರೆಯಾಗುತ್ತದೆ ಅಲ್ಲೆ ಆ MLAಗೆ ಬಹಳ ಮುಜುಗರವಾಗುತ್ತದೆ ಯಾವುದಕ್ಕೆ ಮಾಡಿದ್ದರೂ ಅದೇ ಕ್ಷೇತ್ರಕ್ಕೇ ಆಗುತ್ತದೆ ಆದ್ದರಿಂದ ಅದನ್ನು ಮಾಡದೇ ಅದನ್ನು ಹೆಚ್ಚುವರಿಯಾಗಿ ಮಾಡಬೇಕೆನ್ನುವ ಅಭಿಪ್ರಾಯಕ್ಕೆ ನಾವು ಅಂಧು ಬಂದೆವು ಆ ವಿಚಾರ ಅಂದು ಮುಕ್ತಾಯ ಕೂಡ

ಆಯಿತು ಮಾನ್ಯ ಸಭಾಧ್ಯಕ್ಷರ ಕೊರಡಿಯಲ್ಲಿ ಈ ಬಗ್ಗೆ ಸಭೆ ನಡೆದಾಗ ಎಲ್ಲಾ ವಿರೋಧ ಪಕ್ಷಗಳ ಮುಖಂಡರೂ ಅದಕ್ಕೆ ತಮ್ಮ ಸಹಮತಿಯನ್ನು ಕೊಟ್ಟರು ಈಗ ಅದೇನಾದರೂ ವ್ಯತ್ಯಾಸವಾಗಿದ್ದರೆ ಅದನ್ನು ತೆಗೆಯಲಾರದಂತೆ ಮತ್ತೆ ಸೇರಿಸತ್ತಕ್ಕದ್ದೇನಿದೆ ಅದನ್ನು ಮಾಡಿಸುತ್ತೇವೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಉದಾಸಿಯವರೆಇಗೆ ಇದುದ ಗೊತ್ತಿಲ್ಲ Hon'ble Chief Minister out of his special love and consideration for me ಮಾಡಿದ್ದಾಖುಎ I am thankful to Hon'ble Chief Minister Since he is not thee, kindly convey my personal regards to Chief Minister and see that the notification is issued I am priviledged man because he has been taking personal interest in all prospects I am honoured ಅಲ್ಲವಾ ? This is a special honour conferred on me an unprivileged man

ಶ್ರೀ ಎಂ ಪಿ ಪ್ರಕಾಶ್ ಈ ವರ್ಷದಲ್ಲಿ ಮಾರ್ಚ್ ಆದಕೂಡಲೆ ಮತ್ತೆ ತೆಗೆದುಕೊಳ್ಳಲು ಬರುತ್ತದೆ ಹೋದ ಸಲವೂ ತೊಂದರೆ ಇತ್ತು, ಏನು ಮಾಡುವುದು ಎಂದಿದ್ದರು ಆದ್ದರಿಂದ ತಲಾ ಆದಾಯ ೨೫೦೦ ರೂಪಾಯಿಗಳಿಗೆ ಮಾಡಬೇಕಾಗಿತ್ತು ಈಗ ಆ ರೀತಿಯಲ್ಲಿ ತೆಗೆದುಕೊಂಡು ಖಂಡಿತ ಮಾಡುತ್ತೇವೆ

ಶ್ರೀ ಕೆ ಶ್ರೀನಿಔಅಸ ಗೌಡ ಅದರಲ್ಲಿ ನಮ್ಮದೂ ಇದೆ .

ಶ್ರೀ ಎಂ ಪಿ ಪ್ರಕಾಶ್ ಅದೂ ಆಗಬಹುದು ಆಲಂಗೂರು ಶ್ರೀನಿವಾಸ್ ರವರನ್ನು ಒಪ್ಪಿಸುವ ಜವಾಬ್ದಾರಿ ನನ್ನದು

ಶ್ರೀ ಕೆ ಶ್ರೀನಿವಾಸ ಗೌಡ ಅದನ್ನು ಅವರು ತೆಗೆದಿಲ್ಲ ಆದ್ದರಿಂದ ಅವರ ಮೇಲೆ ನನ್ನ blame ಇಲ್ಲ ಅದನ್ನು ತೆಗೆದಿರುವವರು ಅಧಿಕಾರಿಗಳು ಅದನ್ನು ಸೇರಿಸಿಕೊಡಬೆಕು ಅಷ್ಟೇ ನಾನು ಕೇಳುವುದು

ಶ್ರಿ ಕೆ ಆರ್ ರಮೇಶ್ ಕುಮಾರ್ ನನ್ನದನ್ನು ಅವರದ್ದರ ಜೊತೆ club ಮಾಡಬೇಡಿ ಅವರು ordinary people

ಋ) **ವಿಷಯ ಮಂಗಳೂರಿನ ಕರಾವಳಿ ಅಲೆ ಪತ್ರಿಕೆಯ ಸಂಪಾದಕರನ್ನು ಹಾಗೂ ಅವರ ಶ್ರೀಮತಿಯವರನ್ನು ಬಂದಿಸಿರುವ ಬಗ್ಗೆ –**

ಶ್ರೀ ಜೆ ಏ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಅಧ್ಯಕ್ಷರೆ, ಮಾರ್ಚ್ ೩ನೇ ತಾರೀಖು ಮಂಗಳೂರಿನಲ್ಲಿ ಕರಾವಳಿ ಅಲೆ ಪತ್ರಿಕೆಯ ಸಂಪಾದಕರನ್ನು ಮತ್ತು ಅವರ ಶ್ರೀಮತಿಯವರನ್ನು ರಜೆ ಇರುವ ಮಾರನೇ ದಿವಸ ಪೊಲೀಸ್ ನವರು ಬಂಧಿಸಿ ಜೈಲಿಗೆ ಹೋಗುವ ರೀತಿ ಮಾಡಿದರು ಅವರು ಅಪರಾಧ ಮಾಡಿದ್ದರೆ ಕಾನೂನಿನ ಪ್ರಕಾರ ತನಿಖೆ ಮಾಡಿದ್ದರೆ ನಮ್ಮದೇನೂ ಅಭ್ಯಂತರವಿಲ್ಲ ಆದರೆ, ಅಲ್ಲಿನ ಪೊಲೀಸ್ ನವರು, ಮುಖ್ಯವಾಗಿ ಅಲ್ಲಿನ ಸಬ್ ಇನ್ಸ್ ಪೆಕ್ಟರ್ ಮತ್ತು ಎಸ್ ಪಿ ಇಬ್ಬರು ಸೇರಿ ಉದ್ದೆಶಪೂರ್ವಕವಾಗಿ ಆ ಪತ್ರಿಕಾ ಸಂಪಾದಕರಿಗೆ ಮಾನಸಿಕ ಹಿಂಸೆ ಕೊಡತಕ್ಕ ರೀತಿಯಲ್ಲೇನು ವರ್ತನೆ ಮಾಡಿದ್ದಾರೆ ಕಾನೂನಿನ ಪ್ರಕಾರ ತನಿಖೆ ಮಾಡಿದ್ದರೆ ನಮ್ಮದೇನೂ ಅಭ್ಯಂತರವಿಲ್ಲ ಆದರೆ, ಅಲ್ಲಿನ ಪೊಲೀಸ್ ನವರು, ಮುಖ್ಯವಾಗಿ ಅಲ್ಲಿನ ಸಬ್ ಇನ್ಸ್ ಪೆಕ್ಟರ್ ಮತ್ತು ಎಸ್ ಪಿ ಇಬ್ಬರು ಸೇರಿ ಉದ್ದೇಶಪೂರ್ವಕವಾಗಿ ಆ ಪತ್ರಕಾ ಸಂಪಾದಕರಿಗೆ ಮಾನಸಿಕ ಹಿಂಸೆ ಕೊಡತಕ್ಕ ರೀತಿಯಲ್ಲೇನು ವರ್ತನೆ ಮಾಡಿದ್ದಾರೆ ಅದರ ಬಗ್ಗೆ ನನ್ನ ತೀವ್ರ ರೀತಿಯ ಆಕ್ಷೇಪವಿದೆ ಅವರು ಏನಾದರೂ ಕಾನೂನುಬಾಹಿರವಾದ ಕೆಲಸ ಮಾಡಿದ್ದರೆ ಕ್ರಮ ತೆಗೆದುಕೊಳ್ಳಲು ನಮ್ಮ ಅಭ್ಯಂತರವಿಲ್ಲ ಅವರು ಏನೋ ಜೈನಮುನಿಗಲ ಬಗ್ಗೆ ಪತ್ರಿಕೆಯಲ್ಲಿ ಬರೆದಿದ್ದಾರೆಂದು ಕೇಸನ್ನು register ಮಾಡಿ ಅವರಿಗೆ F I R, warrant ಏನೂ ಕೊಟ್ಟಿಲ್ಲ, ಏಕಾಏಕಿ ರಾತ್ರಿ ಮನೆಯಿಂದ ಅವರನ್ನೂ ಅವರ ಶ್ರೀಮತಿಯವರನ್ನೂ ಹಿಡಿದುಕೊಂಡು ಪೊಲೀಸ್ station ಗೆ ಬಂದು arrest ಮಾಡಿ ರಾತ್ರೋರಾತ್ರೆ Magistrate ಮುಂದೆ produce ಮಾಡಿ ಜೈಲಿಗೆ ಕಳುಹಿಸಿದ್ದಾರೆ ಈ